ಸಿಡಿದೇಳುತ್ತಿದ್ದ, ಕೆಂಡಕಾರುತ್ತಿದ್ದ. ಆ ಹೊಲೆಯರು ಯಥಾಸ್ಥಿತಿಯಲ್ಲೇ ಸದಾ ಕಾಲ ಉಳಿದಿರುವುದು ನಮ್ಮಪ್ಪನಿಗೆ ಲಾಭದಾಯಕ ತಾನೆ?

'ಸಮಾಜವಾದ, ಬಂಡಾಯ ಅಂತ ಇಷ್ಟು ಕಳಕಳಿಯಿಂದ ಮಾತಾಡುವ ನೀನಾದರೂ ಯಾಕೆ ನಿನ್ನ ಹಳ್ಳಿಗೆ ಹಿಂತಿರುಗಿ, ಆ ದಲಿತರ ಉದ್ಧಾರಕ್ಕಾಗಿ ಕೆಲಸ ಮಾಡಬಾರದು?' ನಾನು ಕೊಂಚ ವ್ಯಂಗ್ಯ, ಹಾಸ್ಯದಿಂದ ಕೇಳಿದೆ. ಚಂದ್ರ ಗಂಭೀರವಾಗಿಯೇ ಉತ್ತರಿಸಿದ. 'ನನಗೇನೋ ನಿಜವಾಗಿ ಆಸೆ ಇದೆ ಸಾರ್. ಆದರೆ ನನ್ನ ಅಪ್ಪ ಬಿಡಬೇಕಲ್ಲ! ನಾನು ಆ ಹಳ್ಳಿಯಲ್ಲಿರುವುದೇ ಅವರಿಗೆ ಇಷ್ಟವಿಲ್ಲವಲ್ಲ.' 'ನಿನ್ನ ತಂದೆ ವಿರುದ್ಧ ಹೋರಾಡೊ ತಾಕತ್ತು ನಿನಗಿಲ್ವ?' 'ಇಲ್ಲ ಸಾರ್, ಅವರು ಅಲ್ಲಿ ಎಷ್ಟು ಪ್ರಬಲರಾಗಿದ್ದಾರೆಂದರೆ, ಯಾರಿಗೂ ಅವರು ವಿರುದ್ಧ ಹೋಗೋ ಧೈರ್ಯವಿಲ್ಲ. ಅವರು ಬದುಕಿರೋ ತನಕ ಅಲ್ಲಿ ನಾನು ಒಬ್ಬಂಟಿಯಾಗಿ ಏನೂ ಬದಲಾವಣೆ ತರಲು ಸಾಧ್ಯವಿಲ್ಲ.' ಇನ್ನೂ ಹೆಚ್ಚಿಗೆ ಅವನನ್ನು ಚುಚ್ಚುವುದು ಸರಿಯಲ್ಲವೆಂದು ಸುಮ್ಮನಾದೆ.

★★★

ಕೆಲವು ದಿನಗಳಿಂದ ಚಂದ್ರ ಪತ್ತೆ ಇರಲಿಲ್ಲ. ಅವನ ಗೆಳೆಯ ಸುರೇಶ ಕಂಡಾಗ ಕೇಳಿದೆ. 'ಅವನ ತಂದೆಗೆ ಸೀರಿಯಸ್ ಅಂತ ಟೆಲಿಗ್ರಾಂ ಬಂದಿತ್ತು. ಊರಿಗೆ ಹೋಗಿದ್ದಾನೆ' ಎಂದ.

ಎರಡು ವಾರಗಳ ನಂತರ ಒಂದು ಸಂಜೆ ಚಂದ್ರ ನನ್ನ ಮನೆಗೆ ಬಂದ. ತಲೆ, ಮೀಸೆ ಬೋಳಿಸಿದ್ದ. ಹಿಂದಿನ ಕಾಂತಿ, ಲವಲವಿಕೆ, ಉತ್ಸಾಹ ಇರಲಿಲ್ಲ. ಮಂಕುಬಡಿದವನಂತೆ ಕಾಣುತ್ತಿದ್ದ. 'ನನ್ನ ತಂದೆ ಹೋಗಿಬಿಟ್ಟರು' ಎಂದ. 'ಐ ಆಮ್ ಸಾರಿ, ಏನಾಗಿತ್ತು?' ಗಂಭೀರವಾಗಿ ಕೇಳಿದ. 'ರಕ್ತದ ಒತ್ತಡ ಇತ್ತು. ಭಾರೀ ಹೃದಯಾಘಾತವಾಯ್ತಂತೆ. ನಾನು ಊರಿಗೆ ಹೋಗೋಷ್ಟರಲ್ಲಿ ಸತ್ತು ಹೋಗಿದ್ದರು. ವಿಧಿಗಳೆಲ್ಲ ಮುಗಿಸಿ ಬಂದೆ' ಎಂದ. 'ಮುಂದೆ ಏನು ಮಾಡ್ಬೇಕೂಂತ ಇದ್ದೀಯ? ಊರಲ್ಲಿ ಹೊಲಗದ್ದೆ ಆಸ್ತಿಪಾಸ್ತಿ ಯಾರು ನೋಡ್ಕೋತ್ತಾರೆ?' ಕೇಳಿದೆ. 'ಸಾರ್, ಇಂದು ನನ್ನ ಜೀವನದ ಪರ್ವಕಾಲ. ಈಗ ನಾನು ಸರಿಯಾದ ನಿರ್ಧಾರ ಕೈಗೊಳ್ಳಬೇಕಾಗಿದೆ. ನೀವು ನನಗೆ ಸಹಾಯ ಮಾಡಬೇಕು, ದಾರಿ ತೋರಿಸಬೇಕು' ಎಂದ. 'ನೋಡಪ್ಪ, ನೀನೇನೂ ಅರಿಯದ ಹುಡುಗನಲ್ಲ, ಸ್ವಂತ ಬುದ್ಧಿ ಇದೆ. ವಿವೇಚನೆ ಇದೆ. ನಿನ್ನ ಭವಿಷ್ಯ ನೀನೇ ರೂಪಿಸಿಕೊಳ್ಳಬೇಕು. ಸ್ವಂತ ನಿರ್ಧಾರ ಮಾಡಬೇಕು. ಅದಕ್ಕೆ ಸಂಪೂರ್ಣ ಹೊಣೆಗಾರನಾಗಬೇಕು' ನಾನು ನುಣುಚಿ ಕೊಳ್ಳುತ್ತಾ ಹೇಳಿದೆ. 'ಅದಲ್ಲ, ಸಾರ್. ನಾನೀಗ ನಿಮಗೊಂದು ಗುಟ್ಟು ಹೇಳ್ತೀನಿ, ನಿಮ್ಮಲ್ಲಿ ಸಂಪೂರ್ಣ ನಂಬಿಕೆ ಇರೋದ್ರಿಂದ ಹೇಳ್ತೀದೀನಿ. ಈ ವಿಷಯ ಬೇರೆ ಯಾರಿಗೂ ಗೊತ್ತಿಲ್ಲ. ದಯವಿಟ್ಟು ಯಾರಿಗೂ ಹೇಳ್ಬೇಡಿ' ಎಂದ. 'ಸರಿ, ಹೇಳು' ಎಂದೆ.

'ಊರಿನಲ್ಲಿ ಅಪ್ಪನ ಉತ್ತರಕ್ರಿಯೆಗಳೆಲ್ಲ ಮುಗಿಸಿ ಆಗಿತ್ತು. ಅಕ್ಕಭಾವ ಇನ್ನೂ ಊರಲ್ಲೇ ಇದ್ದದ್ದರಿಂದ ಮನೆಯಲ್ಲಿ ಸಿಗರೇಟು ಸೇದಲು ಸಾಧ್ಯವಿಲ್ಲದೆ ಒಂದು ಸಂಜೆ ಮಬ್ಬುಗತ್ತಲಲ್ಲಿ ಊರಾಚೆ ನಮ್ಮ ತೋಟದಲ್ಲಿ ಕೂತು, ಸಿಗರೇಟು ಸೇದ್ತಾ ಇದ್ದೆ. ಆಗ ಕೊಂಚ ವಯಸ್ಸಾದ ಒಬ್ಬ ಹೊಲೆಯ ಹೊಲತಿ ನನ್ನ ಬಳಿ ಬಂದು ಬಗ್ಗಿ ಸಮಸ್ಕಾರ ಮಾಡಿ, ಕೈಜೋಡಿಸಿ, ದೂರದಲ್ಲೇ ನಿಂತರು. ನಾನು 'ಏನು ಬೇಕಿತ್ತು' ಎಂದು ಕೇಳಿದೆ. ಆ ಮುದುಕ ಅನುಮಾನಿಸುತ್ತಾ ಚಡಪಡಿಸುತ್ತಾ ಕೈಕೈ ಹೊಸೆಯುತ್ತಾ ನಿಂತ. ನಾನು ಧೈರ್ಯ ಹೇಳಿದೆ. ಅವನೆಂದ, 'ನಿಮ್ಮಪ್ಪ ದೊಡ್ಡರೆಡ್ಡಿ ದೇವರಂಥ ಮನುಷ್ಯರು. ತಾವಿರೋ ತನಕ ನಮ್ಮನ್ನು